# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಸಿಡಿ\1947\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:18/07/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಬೆಂಗಳೂರು ಉತ್ತರ ತಾಲ್ಲೂಕ್ ಬಾಗಲೂರು ಗ್ರಾಮದ ಸರ್ವೆ ನಂ.329ರ ಜಮೀನಿನ ಪೂರ್ವದ ಕಡೆಗೆ ಇರುವ ರಾಜಾಕಾಲುವೆಯ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.

*******

ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕ್ ಬಾಗಲೂರಿನ ಶ್ರೀ.ಪಿ.ನಾಗರಾಜು ಬಿನ್ ಪಿಳ್ಳಪ್ಪ ರವರು ರವರು ಈ ಹಿಂದೆ ದೂರು ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಸಿಡಿ\3117\2013ರಲ್ಲಿ ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ದೂರುದಾರರಿಂದ ಹೆಚ್ಚುವರಿ ಮಾಹಿತಿ ನೀಡುವಂತೆ ಕೇಳಲಾಗಿ, ಆ ಸಂದರ್ಭದಲ್ಲಿ ಸದರಿಯವರು ಶ್ರೀ.ದೀಪಕ್ ಎಂಬುವವರು ಸರ್ವೆ ನಂ.333ರ ರಾಜಾಕಾಲುವೆಯನ್ನು ಒತ್ತುವರಿ ಮಾಡಿರುತ್ತಾರೆಂದು ತಿಳಿಸಿದ್ದು, ನಂತರ ಸದರಿ ದೂರನ್ನು ಮುಕ್ತಾಯಗೊಳಿಸಲಾಗಿದೆ. ಈ ಬಗ್ಗೆ ತಹಶೀಲ್ದಾರ್‌ರವರಿಂದ ವರದಿ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ ರಾಜಾಕಾಲುವೆಯನ್ನು ಒತ್ತುವರಿ ಮಾಡಿದ ಒತ್ತುವರಿದಾರರನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ, ಕಲಂ 94(3)ರಡಿ ಕ್ರಮ ಕೈಗೊಂಡು ಒತ್ತುವರಿದಾರರನ್ನು ತೆರವುಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ, ಆ ನಂತರ ಕೆಲವು ಗ್ರಾಮಸ್ಥರುಗಳು ಸದರಿ ರಾಜಾಕಾಲುವೆಯನ್ನು ಒತ್ತುವರಿ ಮಾಡಿ, ಸಾರ್ವಜನಿಕ ರಸ್ತೆ ಮಾಡಿಕೊಂಡು ಓಡಾಡುತ್ತಿರುವುದಾಗಿ ಹೇಳಿದ್ದಾರೆ.

2. ಈ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 7(2) ಅಡಿ ಸ್ವಯಂ ಪ್ರೇರಿತ ದೂರನ್ನು ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕ್ 1) ತಹಶೀಲ್ದದಾರ್ ಶ್ರೀ.ಬಾಳಪ್ಪ, 2)ಬೆಂಗಳೂರು ವೃತ್ತ ನಾಡಾ ಕಛೇರಿಯ ಉಪ ತಹಶೀಲ್ದಾರ್‌ರಾದ ಶ್ರೀ.ಶಿವಕುಮಾರ ಮತ್ತು 3) ಜಾಲಾ ಹೋಬಳಿ

ಬಾಗಲೂರು ಗ್ರಾಮ ಲೆಕ್ಕಿಗರಾದ ಶ್ರೀ.ಅಶ್ವಥ್ (ಇನ್ನು ಮುಂದೆ, 1 ರಿಂದ 3ನೇ ಎದುರುದಾರರು ಎಂದು, ಕ್ರಮವಾಗಿ ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಪ್ರಕರಣದ ತನಿಖೆಗೆ ಕೈಗೊಂಡಿದ್ದಿದೆ.

2. ಒಂದನೇ (1ನೇ) ಎದುರುದಾರರಿಂದ ಸದರಿ ಒತ್ತುವರಿದಾರರ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಕೇಳಲಾಗಿ, 1ನೇ ಎದುರುದಾರರು ಯಾವುದೇ ವರದಿಯನ್ನು ಸಲ್ಲಿಸಿಲ್ಲ.

3. ಎರಡು (2) ಮತ್ತು 3ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 2ನೇ ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

4. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಬಾಗಲೂರು ಗ್ರಾಮದ ಸರ್ವೆ ನಂ.333ರ ರಾಜಾಕಾಲುವೆ ಒತ್ತುವರಿ ವಿಚಾರದಲ್ಲಿ ತಾವು ಕರ್ತವ್ಯ ನಿರ್ವಹಿಸಿಲ್ಲ ಹಾಗೂ ಸುಮಾರು 2 ವರ್ಷಗಳ ಹಿಂದೆಯೇ ನಿಯೋಜನೆ ಮೇರೆಗೆ ಕರ್ತವ್ಯದಿಂದ ಬಿಡುಗಡೆ ಹೊಂದಿ ದಿ:18/09/14ರಿಂದ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿ ರವರಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸರ್ವೆ ನಂ.329ರ ಬಾಜು ಹಳ್ಳದ ಪ್ರದೇಶವಾಗಿದ್ದು, ಸದರಿ ಪ್ರದೇಶದಲ್ಲಿ ಸರ್ವೆ ನಂ.329/1ರ ವಿಸ್ತೀರ್ಣ 2 ಗುಂಟೆ ಜಮೀನನ್ನು ಶ್ರೀ.ಪಿ.ನಾಗರಾಜು ಮತ್ತು ಶ್ರೀ.ಪಿ.ಬಚ್ಚೇಗೌಡ ರವರುಗಳು ಒತ್ತುವರಿ ಮಾಡಿರುವುದಾಗಿ ನಮೂದಾಗಿದೆ. ಆದರೆ, ಸದರಿ ಒತ್ತುವರಿಯ ಬಗ್ಗೆ ಕ್ರಮ ಕೈಗೊಂಡ ಬಗ್ಗೆ ವರದಿಯನ್ನು ಕೇಳಲಾಗಿ, 1ನೇ ಎದುರುದಾರು ಯಾವುದೇ ವರದಿಯನ್ನು ಹಾಜರುಪಡಿಸಿಲ್ಲ ಮತ್ತು ಸದರಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. 2 ಮತ್ತು 3ನೇ ಎದುರುದಾರರು ಸಹ ಸದರಿ ಒತ್ತುವರಿ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಈ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿ ನೀಡದೇ ಕರ್ತವ್ಯ ಲೋಪ ಎಸಗಿದ್ದಾರೆ. ಸರ್ವೆ ನಂ.329ರ ರಾಜಾಕಾಲುವೆ ಜಮೀನಿನಲ್ಲಿ ಸರ್ವೆ ನಂ.329/1ರ ಹಿಡುವಳಿದಾರರಾದ

ಶ್ರೀ.ಪಿ.ನಾಗರಾಜು ಮತ್ತು ಶ್ರೀ.ಪಿ.ಬಚ್ಚೇಗೌಡ ರವರುಗಳು ಒತ್ತುವರಿ ಮಾಡಿದ್ದು ಹಾಗೂ ಸದರಿ ರಾಜಾಕಾಲುವೆ ಜಮೀನಿನಲ್ಲಿ ಸಾರ್ವಜನಿಕರು ರಸ್ತೆ ನಿರ್ಮಾಣ ಮಾಡಿ, ಉಪಯೋಗಿಸುತ್ತಿದ್ದು, ಸದರಿ ರಾಜಾಕಾಲುವೆಯ ಒತ್ತುವರಿಯನ್ನು ತೆರವುಗೊಳಿಸಿ, ನಗರದ ಮಳೆ ನೀರು ಸರಾಗವಾಗಿ ಹರಿದು ಹೋಗಲು ಅವಕಾಶ ಕಲ್ಪಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ, ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಸದರಿ ಸರ್ವೆ ನಂ.329ರ ರಾಜಾಕಾಲುವೆ ಜಮೀನಿನಲ್ಲಿ ರಾಜಾಕಾಲುವೆಯ ಒತ್ತುವರಿಯನ್ನು ತೆರವುಗೊಳಿಸಿ, ನಗರದ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Ananda 18/7

(ನ್ಯಾಯಾಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತರು–1,**
**ಕರ್ನಾಟಕ ರಾಜ್ಯ.**